**ದಿನಾಂಕ: 09-12-2015 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡೆವಳಿಗಳು.**

ಸಭೆಯಲ್ಲಿ ಹಾಜರಿದ್ದವರು:

1. ಶ್ರೀ ಟಿ. ರಾಮನಾಯ್ಕ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2. ಡಾ॥ ಶೇಖರ್.ಡಿ ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ. ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ. ಜಿ.ಸಿ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.
6. ಶ್ರೀಮತಿ. ಶ್ರೀಲತಾ ಕೋಟೇಮಠ್, ಅಧೀನ ಕಾರ್ಯದರ್ಶಿಗಳು.

ಈ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:

1. **ಕರ್ನಾಟಕ ಮಾಹಿತಿ ಆಯೋಗವು ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಪ್ರಕರಣಗಳನ್ನು ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮಾಹಿತಿ ಹಕ್ಕು ನಿಯಮ (ಕೆಆರ್‌ಟಿಐ)ಗಳಲ್ಲಿ ಉಪಬಂಧ ಸೇರ್ಪಡೆಗೊಳಿಸುವ ಬಗ್ಗೆ.**

ಕರ್ನಾಟಕ ಮಾಹಿತಿ ಆಯೋಗವು ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಪ್ರಕರಣಗಳನ್ನು ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮಾಹಿತಿ ಹಕ್ಕು ನಿಯಮ (ಕೆಆರ್‌ಟಿಐ)ಗಳಲ್ಲಿ ಉಪಬಂಧ ಸೇರ್ಪಡೆಗೊಳಿಸುವ ಬಗ್ಗೆ 2013-14ನೇ ಸಾಲಿನ ವಾರ್ಷಿಕ ವರದಿಯಲ್ಲಿನ ಆಯೋಗದ ಕ್ರಮ ಸಂಖ್ಯೆ: 7.15 ಶಿಫಾರಸ್ಸಿನಂತೆ ಕ್ರಮಕೈಗೊಳ್ಳಲ್ಲು ಸಿ.ಆ.ಸು.ಇ(ಜನಸ್ಪಂದನ) ಇವರಿಂದ ಕರಡು ಉಪಬಂಧಕಗಳನ್ನು ರಚಿಸಲು ನಮ್ಮಿಂದ ಮಾಹಿತಿಯನ್ನು ಕೋರಿದ್ದು ಈ ಬಗ್ಗೆ ಕೇಂದ್ರ ಮಾಹಿತಿ ಆಯೋಗ, ಹಾಗೂ ಇತರೆ ಆಯೋಗಗಳಲ್ಲಿ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ತುರ್ತಗಿ ತರಿಸಿ ಇದನ್ನು ಮುಂದಿನ ಆಯೋಗದ ಸಭೆಯಲ್ಲಿ ಚರ್ಚಿಸಲು ಚರ್ಚಾವಿಷಯವಾಗಿ ತೆಗೆದುಕೊಳ್ಳಲು ಸಭೆ ತಿರ್ಮಾನಿಸಿತು. ಈ ಸಂಬಂಧ ಕಾರ್ಯದರ್ಶಿಯವರಿಗೆ ಇವರೆಲ್ಲರಿಂದ ಪತ್ರ ಮುಖೇನ ಮಾಹಿತಿ ತರಿಸುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

2. **ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಕಛೇರಿ ಪತ್ರ.**

ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಕಛೇರಿಯಿಂದ ಬಂದಂತಹ ಪತ್ರಕ್ಕೆ ಸೂಕ್ತವಾಗಿ ಉತ್ತರವನ್ನು ಬರೆಯುವಂತೆ ಸಭೆ ಕಾರ್ಯದರ್ಶಿಯವರಿಗೆ ಸೂಚಿಸುತ್ತ ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 15.4ರಂತೆ ಆಯೋಗವು ಒಂದು ಅರೆನ್ಯಾಯಿಕ ಹಾಗೂ ಸ್ವಾಯಕ್ತ ಸಂಸ್ಥೆಯಾಗಿದ್ದು, ಇದನ್ನು ಪರೀವಿಕ್ಷಣೆ ಮಾಡುವುದು ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಕಾಯ್ದೆಯಡಿ ಅವಕಾಶವಿರುವುದಿಲ್ಲ, ಎಂದು ತಿಳಿಸಿ ಹೇಳಿ ಪತ್ರಿಸಬೇಕೆಂದು ಹಾಗೂ ಅವರ ಇಲಾಖೆಯಲ್ಲಿ ಈ ಮೇಲಿನ ಪತ್ರಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಆಯೋಗಕ್ಕೆ ತಿಳಿಸಬೇಕೆಂದು ಕೋರಲು ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

3. <u>ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.</u>

1. ಇತ್ತೀಚೆಗೆ ಆಯೋಗಕ್ಕೆ ಕರ್ನಾಟಕ ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 7.3ರ ಅಡಿಯಲ್ಲಿ ಕಲಂ 19(3)ರ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಗಣಿಸಿ ಆದೇಶಿಸಬೇಕೆಂದು, ಹಾಗೂ ಅರ್ಜಿದಾರರು ತಾವು ಹಿರಿಯ ನಾಗರಿಕರೆಂದು ಮನವಿ ಮಾಡಿಕೊಳ್ಳುತ್ತಾ ಕಲಂ 19(3)ರ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಪರಿಗಣಿಸಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಸಭೆಯು ಕಾರ್ಯದರ್ಶಿಯವರಿಗೆ ಇತರೆ ಆಯೋಗಗಳಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾಹಿತಿಯನ್ನು ತರಿಸಲು ಸೂಚಿಸಿತು.

ಕ್ರಮ: ಕಾರ್ಯದರ್ಶಿ

ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

## ಕರ್ನಾಟಕ ಮಾಹಿತಿ ಆಯೋಗದಲ್ಲಿ ಕಾನೂನು ಅಧಿಕಾರಿಗಳ ನೇಮಕಾತಿ ಸಂಬಂಧ ದಿನಾಂಕ: 09.12.2015 ರಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಅಧ್ಯಕ್ಷತೆಯಲ್ಲಿ ನಡೆದ ಆಯುಕ್ತರ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರು:

O/C

1. ಶ್ರೀ ಟಿ. ರಾಮನಾಯ್ಕ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2. ಡಾ॥ ಶೇಖರ್ .ಡಿ ಸಜ್ಜನರ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ. ಎಲ್. ಕೃಷ್ಣಮೂರ್ತಿ, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಶಂಕರ್ ಆರ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ. ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ.

ಶ್ರೀ. ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿಗಳು ಇವರು ದಿನಾಂಕ: 03.08.2015 ರಂದು ನಿವೃತ್ತಿ ಹೊಂದಿದ್ದು, ನಂತರ ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ರವರಿಗೆ ನಿವೃತ್ತಗೊಂಡ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರುಗಳು ಹಾಗೂ ವಿಶೇಷವಾಗಿ ನ್ಯಾಯಾಂಗ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿರುವಂತಹ ನ್ಯಾಯಾಧೀಶರುಗಳ ಪಟ್ಟಿಯನ್ನು ನೀಡುವಂತೆ ಕೋರಲಾಗಿ ಸುಮಾರು 41 ಜನರ ಪಟ್ಟಿಯನ್ನು ದಿನಾಂಕ: 29.09.2015 ರಂದು ಆಯೋಗಕ್ಕೆ ಕಳುಹಿಸಿರುತ್ತಾರೆ ಹಾಗೂ ಆಯೋಗಕ್ಕೆ ನೇರವಾಗಿ ಅರ್ಜಿಯನ್ನು ಸಲ್ಲಿಸಿರುವಂತಹ 6 ಜನ ನ್ಯಾಯಾಧೀಶರುಗಳನ್ನು ಒಳಗೊಂಡಂತೆ ಒಟ್ಟು 47 ಜನರಿಗೆ ಅವರ ವೈಯಕ್ತಿಕ ಮಾಹಿತಿಯನ್ನು ಪಡೆಯಲು ಪತ್ರ ಬರೆಯುವಂತೆ ಸಭೆ ಸೂಚಿಸಿತ್ತು.

ಸಭೆಯ ಸೂಚನೆಯಂತೆ ಮೇಲೆ ತಿಳಿಸಿರುವ ನಿವೃತ್ತ ನ್ಯಾಯಾಧೀಶರುಗಳಿಗೆ ಕಾರ್ಯದರ್ಶಿಗಳು ದಿನಾಂಕ: 15.10.2015 ರಂದು ಪತ್ರ ಬರೆದು ದಿನಾಂಕ: 28.10.2015 ರೊಳಗಾಗಿ ಆಯೋಗದ ಕಛೇರಿಗೆ ಖುದ್ದಾಗಿ ಅಥವಾ ಕಾರ್ಯದರ್ಶಿಗಳ ಮಿಂಚ್ಚಂಚೆ (ಇ-ಮೇಲ್) ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿತ್ತು. ಇದಕ್ಕೆ ಉತ್ತರವಾಗಿ 15 ಜನ ನ್ಯಾಯಾಧೀಶರುಗಳು ತಮ್ಮ ಸಮ್ಮತಿಯನ್ನು ಸೂಚಿಸಿ ಆಯೋಗಕ್ಕೆ ಪತ್ರಿಸಿರುವ ಬಗ್ಗೆ ಕಾರ್ಯದರ್ಶಿಯವರು ಸಭೆಗೆ ಸೂಚಿಸಿದರು. ಇವರುಗಳ ಪೈಕಿ ಒಬ್ಬರು ನ್ಯಾಯಾಧೀಶರು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅವರನ್ನು ಹೊರತು ಪಡಿಸಿ ದಿನಾಂಕ: 09.12.2015 ರಂದು 14 ಜನರನ್ನು ಸಮಾಲೋಚನೆಗಾಗಿ ಕರೆಸುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಅವರೆಲ್ಲರಿಗೂ ಪತ್ರ ಹಾಗೂ ದೂರವಾಣಿ ಮುಖೇನ ಸಮಾಲೋಚನೆಗಾಗಿ ಕರೆಸಲಾಗಿದೆ ಎಂಬ ಅಂಶವನ್ನು ಕಾರ್ಯದರ್ಶಿಗಳು ಸಭೆಯ ಮುಂದಿರಿಸಿದರು.

ಮೇಲೆ ತಿಳಿಸಿರುವ ಒಟ್ಟು 14 ನಿವೃತ್ತ ನ್ಯಾಯಾಧೀಶರುಗಳ ಪೈಕಿ 9 ಜನರು ಹಾಜರಿದ್ದು, ಅವರುಗಳಲ್ಲಿ ಶ್ರೀ. ಬಿ. ಬಾಲಕೃಷ್ಣ, ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ಇವರನ್ನು ಕರ್ನಾಟಕ ಮಾಹಿತಿ ಆಯೋಗದ ಕಾನೂನು ಅಧಿಕಾರಿಯಾಗಿ ನೇಮಿಸಲು ಸಭೆ ಒಮ್ಮತದಿಂದ ತೀರ್ಮಾನಿಸಿತು. ಇವರ ನೇಮಕಾತಿ ಕುರಿತು ಸರ್ಕಾರಕ್ಕೆ ಪತ್ರಿಸಿ ಈ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯು ಕಾರ್ಯದರ್ಶಿಯವರಿಗೆ ಸೂಚಿಸಿತು.

ಾರ್ಯದರ್ಶಿ

ನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು